4) ಯು. ಪಂಪಣ್ಣ ಬಿನ್ ಯು. ರಾಮಣ್ಣ, ದೊಡ್ಡ ಕುರುಬರ ಬೀದಿ, ಹಳದಮ್ಮ ದೇವಸ್ಥಾನದ ಹತ್ತಿರ, ಹಳೇನಗರ, ಭದ್ರಾವತಿ – ರೂ.750/–ಗಳು

5) ಮರಿಯಪ್ಪ ಬಿನ್ ಹನುಮಂತಪ್ಪ, ಸಂಜೀವನಗರ, ಕೋಮರನಹಳ್ಳಿ, ಭದ್ರಾವತಿ – ರೂ. 750/–ಗಳು.

6) ಸಗಣಪ್ಪ ಬಿನ್ ತಿಮ್ಮಪ್ಪ ದೊಡ್ಡ ಕುರುಬರ ಬೀದಿ, ಹಳೇನಗರ, ಭದ್ರಾವತಿ – ರೂ. 750/–ಗಳು.

7) ಹೆಚ್.ಬಿ. ನಾರಾಯಣರಾವ್ ಬಿನ್ ಬಾಳೋಜಿ ರಾವ್, ಹಿರಿಯೂರು ಗ್ರಾಮ, ಭದ್ರಾವತಿ – ರೂ. 750/–ಗಳು.

8) ಗಾಲಿಬ್ ಷರೀಪ್ ಬಿನ್ ಉಮರ್ ಷರೀಪ್, ಬೊಮ್ಮನಕಟ್ಟೆ, ಭದ್ರಾವತಿ – ರೂ. 750/–ಗಳು.

9) ಧರ್ಮೋಜಿ ಬಿನ್ ರಾಮಣ್ಣ, ಹಿರಿಯೂರು, ಭದ್ರಾವತಿ ರೂ. 750/–ಗಳು.

10) ಬಸವರಾಜಪ್ಪ ಬಿನ್ ಅಪ್ಪಜಪ್ಪ, ಹಿರಿಯೂರು ಗ್ರಾಮ, ಭದ್ರಾವತಿ – ರೂ. 1500/–ಗಳು.

11) ಜಿ. ಪಾಂಡುರಂಗ ಬಿನ್ ಗೋಪಾಲನಾಯ್ಕ್, ಮಿಡ್ಲ್‌ಸ್ಕೂಲ್ ಮೈನ್ ರೋಡ್, ಭಂಡಾರಹಳ್ಳಿ, ಕವಲುಗುಂದಿ ಅಂಚೆ, ಭದ್ರಾವತಿ ತಾಲ್ಲೂಕು – ರೂ.1500/–ಗಳು.

12) ಚನ್ನಯ್ಯ ಬಿನ್ ಸೀತಯ್ಯ, ಐಹೆಚ್‌ಎಲ್‌ಸಿ 1ಎ ಹುತ್ತಾ ಕಾಲೋನಿ, ಭದ್ರಾವತಿ – ರೂ. 1500/–ಗಳು.

13) ಸಿರಿಲ್ ಡಿಕಾಸ್ಟ್ ಬಿನ್ ಜಾರ್ಜ್ ಡಿಕಾಸ್ಟ್, ಲಕ್ಷ್ಮೀವೆಂಕಟೇಶ್ವರ ನಿಲಯ, ಕಿತ್ತೂರು ಚೆನ್ನಮ್ಮ ಲೇಔಟ್, 2ನೇ ಅಡ್ಡ ರಸ್ತೆ, ಜನ್ನಾಪುರ, ಭದ್ರಾವತಿ – ರೂ. 1500/–ಗಳು.

ಕ್ರೀಡಾಂಗಣ ಕಾಮಗಾರಿ ಪೂರ್ಣಗೊಳಿಸುವುದು

828 (527) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸದಾಗಿ ಕ್ರೀಡಾಂಗಣ ನಿರ್ಮಿಸುತ್ತಿದ್ದು ಇದುವರೆವಿಗೂ ಪೂರ್ತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅಪೂರ್ಣಗೊಂಡಿರುವ ಕ್ರೀಡಾಂಗಣದ ಕಾಮಗಾರಿ ಪೂರೈಸಲು ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು ;

ಇ) ಇದರ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಜಿ. ಜನಾರ್ಧನರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು) :

ಅ) ಹೌದು.

ಆ) ಕ್ರೀಡಾಂಗಣ ಪೂರ್ಣಗೊಳಿಸಲು ಅಗತ್ಯವಾದ ರೂ.71.50 ಲಕ್ಷಗಳನ್ನು ಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ.

ಇ) ಕಾಮಗಾರಿ ಪ್ರಗತಿಯಲ್ಲಿದ್ದು, ಶೀಘ್ರವಾಗಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗುವುದು.

ಸರ್ಕಾರದ ಸಾಧನೆಗಳನ್ನು ಪ್ರಚಾರ ಮಾಡುವ ಸಲುವಾಗಿ ಮಾಡಿದ ಖರ್ಚಿನ ಮಾಹಿತಿ

831 (209) ಶ್ರೀ ವಸಂತಬಂಗೇರಾ ಕೆ. (ಬೆಳ್ತಂಗಡಿ) : ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ ?

ಅ) 2009–10ರಲ್ಲಿ ಮತ್ತು 2010–11ರಲ್ಲಿ ಸರ್ಕಾರದ ಸಾಧನೆಗಳನ್ನು ಪ್ರಚಾರ ಮಾಡುವ ಸಲುವಾಗಿ ಕಟೌಟ್, ಹೋರ್ಡಿಂಗ್ಸ್ ಮತ್ತು ಬ್ಯಾನರ್‌ಗಳಿಗಾಗಿ ಮಾಡಿದ ಮೊತ್ತವೆಷ್ಟು ;

ಆ) ಕಟೌಟ್, ಹೋರ್ಡಿಂಗ್ಸ್ ಬ್ಯಾನರ್ ರಚನೆ ಮತ್ತು ಅಳವಡಿಕೆಗಾಗಿ ಯಾರಿಗೆ ಯಾವ ಆಧಾರದಲ್ಲಿ ಗುತ್ತಿಗೆ ನೀಡಲಾಗಿದೆ ?